# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಲ್ಲಿ ಕ್ರಮಬದ್ಧವಲ್ಲದ ವರ್ಕ್ ಐಡಿಗಳನ್ನು ನಮೂದಿಸಿ ಬಿಲ್ಲುಗಳನ್ನು ಪಾವತಿಸಿರುವ ಬಗ್ಗೆ ಹಾಗೂ ಬೇರೆ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ ಹಣ ಸಂದಾಯ ಮಾಡಿ ಅಕ್ರಮ ಎಸಗಿರುವ ಬಗ್ಗೆ – ಅಧಿಕಾರಿ / ನೌಕರರ ಅಮಾನತ್ತನ್ನು ತೆರವುಗೊಳಿಸುವ ಬಗ್ಗೆ – ಆದೇಶ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 44 ಇಎನ್‌ಕ್ಯೂ 2015 ದಿನಾಂಕ 08-05-2015
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 44 ಇಎನ್‌ಕ್ಯೂ 2015 ದಿನಾಂಕ 21-05-2015
3. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಟಿಪ್ಪಣಿ / ವರದಿ ಸಂಖ್ಯೆ ಗ್ರಾಅಪ / ಆಶಾ / 506/ಉಖಾಯೋ/2015 ದಿನಾಂಕ 08-06-2015

**ಪ್ರಸ್ತಾವನೆ:**

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಕೆಲವು ಯೋಜನಾ ವಿಭಾಗಗಳ ವ್ಯಾಪ್ತಿಯಲ್ಲಿ " ನಮ್ಮ ಗ್ರಾಮ, ನಮ್ಮ ರಸ್ತೆ " ಯೋಜನೆಯ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸುವ ಸಂದರ್ಭದಲ್ಲಿ ಕ್ರಮಬದ್ಧವಲ್ಲದ ವರ್ಕ್ ಐಡಿಗಳು ಮತ್ತು ಬಿಲ್ಲುಗಳ ದಾಖಲೆಗಳನ್ನು ಅಳವಡಿಸಿರುವುದು, ಬೇರೊಂದು ಕಾಮಗಾರಿಗಳ ಫೋಟೋಗಳನ್ನು ಅಳವಡಿಸಿರುವುದು, ಸಂಬಂಧಪಡದ ಕಾಮಗಾರಿಗಳ ಐಡಿ ಸಂಖ್ಯೆಗಳನ್ನು ಮತ್ತು ಕಾಮಗಾರಿ ಆದೇಶದ ಹಂತದಲ್ಲಿಯೇ ಕೆಲಸ ಪ್ರಾರಂಭಿಸಿದ ಫೋಟೋಗಳನ್ನು ಅಳವಡಿಸಿ ಬಿಲ್ಲುಗಳನ್ನು ತಯಾರಿಸಿ ಅಕ್ರಮ ಎಸಗಿರುವ ಲೋಪಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿ / ನೌಕರರನ್ನು ಸರ್ಕಾರವು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 08-05-2015ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಪಡಿಸಿತ್ತು:-

1. ಶ್ರೀ ಟಿ.ವೆಂಕಟಾಚಲಯ್ಯ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ತುಮಕೂರು.
2. ಶ್ರೀ ಟಿ.ತಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ತುಮಕೂರು.
3. ಶ್ರೀ ಎಂ.ಎಸ್.ಆನಂದಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ತಿಪಟೂರು
4. ಶ್ರೀಮತಿ ನಾಗಮಣಿ, ಲೆಕ್ಕಾಧೀಕ್ಷಕರು, ಯೋಜನಾ ವಿಭಾಗ, ತುಮಕೂರು.
5. ಶ್ರೀ ಎಲ್.ವೆಂಕಟಾಚಲಯ್ಯ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಮಂಡ್ಯ
6. ಶ್ರೀ ಕೆ.ಎಸ್.ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಮಂಡ್ಯ.
7. ಶ್ರೀ ಎಸ್.ಪ್ರಕಾಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಕೆ.ಆರ್.ಪೇಟೆ.

---2

8. ಶ್ರೀ ಆರ್. ಕೃಷ್ಣಪ್ರಸಾದ್, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಹಾಸನ.
9. ಶ್ರೀ ಎಂ.ಎಸ್.ಸತ್ಯನಾರಾಯಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಚನ್ನರಾಯಪಟ್ಟಣ.
10. ಶ್ರೀ ಪಿ. ಚಂದ್ರಶೇಖರಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಹಾಸನ.
11. ಶ್ರೀ ನಾರಾಯಣ್, ಲೆಕ್ಕಾಧೀಕ್ಷಕರು, ಯೋಜನಾ ವಿಭಾಗ, ಮಂಡ್ಯ
12. ಶ್ರೀಮತಿ ಟಿ.ಡಿ.ಮಂಜುಳ, ಲೆಕ್ಕಾಧೀಕ್ಷಕರು, ಯೋಜನಾ ವಿಭಾಗ, ಹಾಸನ.

ಸದರಿ ಆದೇಶದಿಂದ ಬಾಧಿತಗೊಂಡ ಅಧಿಕಾರಿ / ನೌಕರರುಗಳು ಸರ್ಕಾರಕ್ಕೆ ಮನವಿ ಸಲ್ಲಿಸಿ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯ ಹಣ ಪಾವತಿಗಾಗಿ ಬಿಲ್‌ಗಳನ್ನು ಕೇಂದ್ರ ಕಚೇರಿಗೆ ಸಲ್ಲಿಸುವ ಸಮಯದಲ್ಲಿ ಸರ್‌ವರ್ ಹಾಗೂ ತಾಂತ್ರಿಕ ದೋಷದಿಂದ ವರ್ಕ್ ಐಡಿಗಳು ಅದಲು ಬದಲಾಗಿರುತ್ತವೆ ಎಂದು, ಈ ಬಿಲ್ಲುಗಳು ಇನ್ನೂ ಪರಿಶೀಲನೆ ಹಂತದಲ್ಲಿದ್ದು ಯಾವುದೇ ಹಣ ಪಾವತಿಯನ್ನು ಮಾಡಿಲ್ಲವೆಂದು; ತಮ್ಮ ವ್ಯಾಪ್ತಿಯಲ್ಲಿ ಕೇವಲ ರಸ್ತೆ ನಿರ್ಮಾಣ ಮಾಡುತ್ತಿದ್ದು ನೀರು ಸರಬರಾಜು ಕಾಮಗಾರಿಗಳು ಬರುವುದಿಲ್ಲವೆಂದು ತಿಳಿಸಿ ಈ ಒಂದು ನ್ಯೂನತೆಯನ್ನು ಮನ್ನಿಸಿ ಅಮಾನತ್ತನ್ನು ತೆರವುಗೊಳಿಸಿ ಸೇವೆಯಲ್ಲಿ ಪುನರ್ ಸ್ಥಾಪಿಸಬೇಕೆಂದು ಕೋರಿದ್ದರು.

ಸರ್ಕಾರವು ಈ ಬಗ್ಗೆ ಪರಿಶೀಲಿಸಿ, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 21-05-2015ರ ಆದೇಶದಲ್ಲಿ ಗಾಂಧಿ ಸಾಕ್ಷಿ ~~ಕಾಯಕ ತಂತ್ರಾಂಶದಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ~~ ಅಭಿವೃದ್ಧಿ ಕಾಮಗಾರಿಗಳ ಮಾಹಿತಿಯನ್ನು ಅಳವಡಿಸಿದ ನಂತರ ಸದರಿ ಮಾಹಿತಿಗಳನ್ನು ಪರಿಶೀಲಿಸುವ ಸಂದರ್ಭಗಳಲ್ಲಿ ಸರ್ವರ್ ಮತ್ತು ತಾಂತ್ರಿಕ ದೋಷದಿಂದ ಈ ಹಿಂದೆ ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಳವಡಿಸಲಾದ ಮಾಹಿತಿಗಳಲ್ಲಿ ವ್ಯತ್ಯಾಸಗಳು / ಬದಲಾವಣೆಗಳು ಕಂಡುಬಂದಿವೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವ ಸಲುವಾಗಿ ಈ ಕೆಳಕಂಡ ಸಮಿತಿಯನ್ನು ರಚಿಸಿತ್ತು:-

| | | |
|---|---|---|
| 1. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | - | ಅಧ್ಯಕ್ಷರು. |
| 2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು | - | ಸದಸ್ಯರು |
| 3. ಮುಖ್ಯಸ್ಥರು, ನ್ಯಾಷನಲ್ ಇನ್‌ಫಾರ್ಮೆಟಿಕ್ ಸೆಂಟರ್, ಬೆಂಗಳೂರು. | - | ಸದಸ್ಯರು |
| 4. ನಿರ್ದೇಶಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. | - | ಸದಸ್ಯ ಕಾರ್ಯದರ್ಶಿ |

ಅದರಂತೆ ಸಮಿತಿಯು ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ 08-06-2015ರಂದು ಸಲ್ಲಿಸಿರುವ ವರದಿಯಲ್ಲಿ, ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವು ಕಾಮಗಾರಿ ಸಂಕೇತವನ್ನು ದುರುಪಯೋಗವಾಗಿ ಅರೋಹಿಸಲು ಅನುಮತಿಸುವುದಿಲ್ಲವೆಂದು, ವರ್ಕ್ ಐಡಿ ಸಂಖ್ಯೆ: 105102ರಲ್ಲಿ ಯಾವುದೇ ದುರುಪಯೋಗ ನಡೆದಿಲ್ಲವೆಂದು ತಿಳಿದುಬಂದಿದೆ ಎಂದು, ವರ್ಕ್ ಐಡಿ ಸಂಖ್ಯೆ 176394 ಹಾಗೂ 107035ರಲ್ಲಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳತೆಗಳನ್ನು ದಾಖಲಿಸದೆ ಸಂದಾಯದ ಬಿಲ್ಲುಗಳನ್ನು ಸೃಜನೆ ಮಾಡಲು ಅನುಮತಿಸುವುದಿಲ್ಲವೆಂದು, ಈ ವಿವರಗಳನ್ನು ಎನ್.ಐ.ಸಿ. ಬೆಂಗಳೂರು ಇವರು ಖಚಿತಪಡಿಸಿರುತ್ತಾರೆಂದು

---3

ಹಾಗೂ ಸಂದಾಯ ಬಿಲ್ಲುಗಳನ್ನು ಸೃಜನೆ ಮಾಡುವ ಮುನ್ನ ಕಾಮಗಾರಿಗಳ ಅಳತೆಗಳನ್ನು ತಂತ್ರಾಂಶದಲ್ಲಿ ದಾಖಲಿಸಲಾಗಿದ್ದು ತಂತ್ರಾಂಶದಲ್ಲಿ ತಾಂತ್ರಿಕ ಸಮಸ್ಯೆಗಳು / ದೋಷಗಳು ಉದ್ಭವಿಸಿರುವುದರಿಂದ ಕಾಮಗಾರಿಗಳ ಅಳತೆ ವಿವರಗಳನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಾರ್ಯಾಲಯದಲ್ಲಿ ಪರಿಶೀಲಿಸಿದಾಗ ಅದು ತೋರಿಸಿರುವುದಿಲ್ಲವೆಂದು, ಈಗ ಸದರಿ ದೋಷವನ್ನು ಸರಿಪಡಿಸಲಾಗಿರುತ್ತದೆ ಎಂಬ ಅಂಶಗಳನ್ನು ವರದಿಯಲ್ಲಿ ತಿಳಿಸಲಾಗಿದೆ. ಅಲ್ಲದೆ, ಸಮಿತಿಯು ಪರಿಶೀಲಿಸಿರುವ ಮೂರು ವಿಭಾಗಗಳ ವಾರ್ಷಿಕ ಕ್ರಿಯಾ ಯೋಜನೆ ಪಟ್ಟಿಗಳಿಂದ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ದಾಖಲಾಗಿರುವಂತೆ 13 ಕಾಮಗಾರಿಗಳನ್ನು ಅನಿಶ್ಚಿತವಾಗಿ ಆಯ್ಕೆ ಮಾಡಿ ಅವುಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ದಾಖಲಾಗಿರುವ ವಿವರಗಳೊಂದಿಗೆ ಹೋಲಿಕೆ ಮಾಡಿದ್ದು, ಅವುಗಳು ಎಲ್ಲವೂ ತಾಳೆಯಾಗಿರುತ್ತವೆ ಎಂದು, ಲೋಪದೋಷಗಳು ಹಾಗೂ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿರುವ ಅವ್ಯವಹಾರಗಳು ವಿಸ್ತೃತವಾಗಿ ಪರಿಶೀಲಿಸಿದಾಗ ದಾಖಲಿಸಿದ ವಿವರಗಳು ಯಥಾರ್ಥವಾಗಿ ಇರುವುದಿಲ್ಲವೆಂದು ಅಭಿಪ್ರಾಯಿಸಿದ್ದು, ಗಮನಿಸಿದ ಲೋಪದೋಷಗಳು ರುಜುವಾತಾಗಿಲ್ಲದ ಕಾರಣ, ಅಮಾನತ್ತಿನಲ್ಲಿರುವ ಅಧಿಕಾರಿ / ನೌಕರರ ವಿರುದ್ಧ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲವೆಂದು ವರದಿಯಲ್ಲಿ ಅಭಿಪ್ರಾಯಿಸಲಾಗಿದೆ.

ಸರ್ಕಾರವು ಸದರಿ ವರದಿಯಲ್ಲಿನ ವಿವರಗಳನ್ನು ಪರಿಗಣಿಸಿ ಮೇಲೆ ತಿಳಿಸಿರುವ ಅಮಾನತ್ತಿನಲ್ಲಿರುವ ಅಧಿಕಾರಿ / ನೌಕರುಗಳ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಟ್ಟು, ಇವರುಗಳನ್ನು ಸೇವೆಗೆ ಪುನರ್ ಸ್ಥಾಪಿಸಲು ತೀರ್ಮಾನಿಸಿರುತ್ತದೆ. ಆದ್ದರಿಂದ, ಈ ಕೆಳಕಂಡ ಆದೇಶ.

## ಆದೇಶ ಸಂಖ್ಯೆ. ಗ್ರಾಅಪ 44 ಇವಿಕ್ಯೂ 2015, ಬೆಂಗಳೂರು, ದಿನಾಂಕ 26-06-2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿ / ನೌಕರರುಗಳ ವಿರುದ್ಧ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಅರೋಹಣದಲ್ಲಿ ಲೋಪವೆಸಗಿದ್ದಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲು ಉದ್ದೇಶಿಸಲಾಗಿದ್ದ ಶಿಸ್ತು ಕ್ರಮವನ್ನು ಕೈಬಿಟ್ಟು, ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತನ್ನು ತೆರವುಗೊಳಿಸಿ ಸೇವೆಯಲ್ಲಿ ಪುನರ್ ಸ್ಥಾಪಿಸಿ, ಅವರುಗಳ ಹೆಸರಿನ ಮುಂದೆ ತೋರಿಸಿರುವ ಹುದ್ದೆಗಳಲ್ಲಿ ಮುಂದುವರೆಸಿ, ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ.ಸಂ. | ಅಧಿಕಾರಿ ಹೆಸರು ಮತ್ತು ಪದನಾಮ | ಸ್ಥಳನಿಯುಕ್ತಿಗೊಳಿಸಲಾದ ಹುದ್ದೆ |
|---|---|---|
| 1. | ಶ್ರೀ ಟಿ.ವೆಂಕಟಾಚಲಯ್ಯ, ಕಾರ್ಯಪಾಲಕ ಇಂಜಿನಿಯರ್ | ಯೋಜನಾ ವಿಭಾಗ, ತುಮಕೂರು. |
| 2. | ಶ್ರೀ ಟಿ.ತಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಯೋಜನಾ ಉಪ ವಿಭಾಗ, ತುಮಕೂರು. |
| 3. | ಶ್ರೀ ಎಂ.ಎಸ್.ಆನಂದಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಯೋಜನಾ ಉಪ ವಿಭಾಗ, ತಿಪಟೂರು |
| 4. | ಶ್ರೀಮತಿ ನಾಗಮಣಿ, ಲೆಕ್ಕಾಧೀಕ್ಷಕರು, | ಯೋಜನಾ ವಿಭಾಗ, ತುಮಕೂರು. |

---4

| | | |
|---|---|---|
| 5. | ಶ್ರೀ ಎಲ್.ವೆಂಕಟಾಚಲಯ್ಯ, ಕಾರ್ಯಪಾಲಕ ಇಂಜಿನಿಯರ್ | ಯೋಜನಾ ವಿಭಾಗ, ಮಂಡ್ಯ |
| 6. | ಶ್ರೀ ಕೆ.ಎಸ್.ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಯೋಜನಾ ಉಪ ವಿಭಾಗ, ಮಂಡ್ಯ. |
| 7. | ಶ್ರೀ ಎಸ್.ಪ್ರಕಾಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಯೋಜನಾ ಉಪ ವಿಭಾಗ, ಕೆ.ಆರ್.ಪೇಟೆ. |
| 8. | ಶ್ರೀ ಆರ್. ಕೃಷ್ಣಪ್ರಸಾದ್, ಕಾರ್ಯಪಾಲಕ ಇಂಜಿನಿಯರ್ | ಯೋಜನಾ ವಿಭಾಗ, ಹಾಸನ. |
| 9. | ಶ್ರೀ ಎಂ.ಎಸ್.ಸತ್ಯನಾರಾಯಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಯೋಜನಾ ಉಪ ವಿಭಾಗ, ಚನ್ನರಾಯಪಟ್ಟಣ. |
| 10. | ಶ್ರೀ ನಾರಾಯಣ್, ಲೆಕ್ಕಾಧೀಕ್ಷಕರು | ಯೋಜನಾ ವಿಭಾಗ, ಮಂಡ್ಯ |
| 11. | ಶ್ರೀಮತಿ ಟಿ.ಡಿ.ಮಂಜುಳ, ಲೆಕ್ಕಾಧೀಕ್ಷಕರು | ಯೋಜನಾ ವಿಭಾಗ, ಹಾಸನ. |

ಶ್ರೀ ಪಿ.ಚಂದ್ರಶೇಖರಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಗೆ ಪುನರ್ ಸ್ಥಾಪಿಸಿದ್ದು, ಇವರಿಗೆ ಪ್ರತ್ಯೇಕವಾಗಿ ಸ್ಥಳನಿಯುಕ್ತಿ ನೀಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ದೇಶ್ ಪೋಕಲಕಟ್ಟೆ),
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು

---5

6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ / ಮಂಡ್ಯ / ತುಮಕೂರು.
8. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.
9. ಸಂಬಂಧಿಸಿದ ಎಲ್ಲಾ ಅಧಿಕಾರಿ / ನೌಕರರಿಗೆ

ಪ್ರತಿ ಮಾಹಿತಿಗಾಗಿ:

1. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
2. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
3. ನಿರ್ದೇಶಕರು, ಸುಗ್ರಾಮಯೋ, ಗ್ರಾ.ಅ.ಪಂ.ರಾಜ್ ಇಲಾಖೆ.
4. ಮೇಲ್ವಿಚಾರಕರು, ಗಣಕ ಯಂತ್ರ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
5. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.